## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 32/2020 ಪಿ.ಡಬ್ಲ್ಯೂಃ 4

ಸಿಡಬ್ಲೂಃ 7

ಸಾಕ್ಷಿದಾರರ ಹೆಸರು : ಫ್ರಾನ್ಸಿಸ್ ಫರ್ನಾಂಡೀಸ್

ತಂದೆಯ ಹೆಸರು : ಅಲ್ಬರ್ಟ ಫರ್ನಾಂಡೀಸ್

ವಯಸ್ಸು : 24 ವರ್ಷ

ಉದ್ಯೋಗ : ಖಾಸಗಿ ಕೆಲಸ

ವಾಸ್ತವ್ಯ : ಪೋಳೆಂ , ಗೋವಾ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 18-01-2024

(ಸಾಕ್ಷಿದಾರರರಿಗೆ ಕನ್ನಡ ಬರುತ್ತಿಲ್ಲವಾಗಿದ್ದು ಕೊಂಕಣಿ ಭಾಷೆ ಬಲ್ಲವರಾಗಿದ್ದು ಶ್ರೀ ಸಿ ಜಿ ಎನ್ ವಕೀಲರು ಸಾಕ್ಷಿ ಕೊಂಕಣಿಯಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳುವುದಾಗಿ ಪ್ರಮಾಣ ವಚನ ಸ್ವೀಕರಿಸಿ ಸಾಕ್ಷಿ ಕೊಂಕಣಿಯಲ್ಲಿ ಹೇಳಿದ ಸಾಕ್ಷ್ಯವನ್ನು ಸದ್ರಿಯವರು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದನ್ನು ರೆಕಾರ್ಡ್ ಮಾಡಿಕೊಳ್ಳಲಾಯಿತು)

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಆರೋಪಿ ನನ್ನ ಸ್ನೇಹಿತ. ದಿನಾಂಕಃ 03.02.2019 ರಂದು ಅಪಘಾತವಾಗಿರುತ್ತದೆ. ನಾನು ಮತ್ತು ನನ್ನ ಸ್ನೇಹಿತ ದ್ವಿಚಕ್ರ ವಾಹನದಲ್ಲಿ ಕಾರವಾರದಿಂದ ಪೋಳೆಂ ನಲ್ಲಿರುವ ಮನೆಗೆ ಹೋಗುತ್ತಿದ್ದೆವು. ವಾಹನವನ್ನು ಆರೋಪಿಯು ನಿಧಾನವಾಗಿ ಚಲಾಯಿಸುತ್ತಿದ್ದ ಅಂದರೆ ಸುಮಾರು 40 -45 ವೇಗದಲ್ಲಿ ಚಲಾಯಿಸುತ್ತಿದ್ದ. ಗಾಂವಗೇರಿಯಲ್ಲಿ ರಾಮನಾಥ ದೇವಸ್ಥಾನದ ಕ್ರಾಸ್ ಬಳಿ ಮೂರು ಜನರು ರಸ್ತೆಯ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಅವರು ಒಮ್ಮೆಲೆ ನಮ್ಮ ವಾಹನಕ್ಕೆ ಅಡ್ಡ ಬಂದಿದ್ದರಿಂದ ನಮ್ಮ ವಾಹನ ಅವರಿಗೆ ಡಿಕ್ಕಿ ಆಯಿತು. ವಾಹನ ಡಿಕ್ಕಿ ಹೊಡೆದಿದ್ದರಿಂದ ವಾಹನ ಪಲ್ಟಿ ಆಗಿದ್ದು , ಸದರಿ ಮೂರು ಜನರಲ್ಲಿ ಮಧ್ಯದಲ್ಲಿದ್ದ ವ್ಯಕ್ತಿಗೆ ಡಿಕ್ಕಿ ಹೊಡೆದಿದ್ದರಿಂದ ಅವರು ಕೆಳಗೆ ಬಿದ್ದರು. ಅವರಿಗೆ ತಲೆಗೆ ಗಾಯವಾಗಿತ್ತು. ಅವರು ಎಚ್ಚರವಾಗಿದ್ದರು. ಉಳಿದಿಬ್ಬರಿಗೆ ಏನೂ ಆಗಿರಲಿಲ್ಲಾ. ಗಾಯಾಳುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಘಟನೆಯಾದಾಗ ಸಂಜೆ ಸುಮಾರು 7.15 ಗಂಟೆ ಆಗಿರಬಹುದು. ನಾವು ಅವರ ಹೆಸರನ್ನು ವಿಚಾರಿಸಿರುವುದಿಲ್ಲಾ. ಗಾಯಾಳು ಆಸ್ಪತ್ರೆಯಲ್ಲಿ

ಚಿಕಿತ್ಸೆಯಲ್ಲಿದ್ದು , 2-3 ವಾರಗಳ ನಂತರ ತೀರಿಕೊಂಡಿರುತ್ತಾರೆ. ಈ ಕುರಿತು ಪೋಲೀಸರು ನನ್ನನ್ನು ವಿಚಾರಣೆ ಮಾಡಿದ್ದು , ನಾನು ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎಪಿಪಿ ರವರಿಂದಃ**

2. ದಿನಾಂಕಃ 03.02.2019 ರಂದು ಬೆಳಿಗ್ಗೆ ನಾನು ಮತ್ತು ಆರೋಪಿ ಸ್ಕೂಟರ ಮೇಲೆ ಹೋಗುತ್ತಿದ್ದು , ಸ್ಕೂಟರನ್ನು ಆರೋಪಿಯು ವೇಗವಾಗಿ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಆರೋಪಿಯು ಸ್ಕೂಟರನ್ನು ವೇಗವಾಗಿ ಚಲಾಯಿಸುತ್ತಿದ್ದ , ನಾನು ಅವನಿಗೆ ವಾಹನವನ್ನು ನಿಧಾನವಾಗಿ ಚಲಾಯಿಸು , ಆರಾಮವಾಗಿ ಮನೆಗೆ ಹೋಗುವ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ಗಾಂವಗೇರಿ ಹತ್ತಿರ ನಮ್ಮ ಮುಂದಿನಿಂದ ಒಂದು ವಾಹನ ಬಂದಿದ್ದು , ನಮ್ಮ ವಾಹನ ವೇಗವಾಗಿದ್ದ ಕಾರಣ ಆರೋಪಿಯು ಸ್ಕೂಟರನ್ನು ನಿಯಂತ್ರಿಸಲು ಸಾಧ್ಯವಾಗದೇ ಹೆದ್ದಾರಿಯ ಎಡಪಕ್ಕದಲ್ಲಿ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಗಳ ಪೈಕಿ ಮಧ್ಯದವರಿಗೆ ಆರೋಪಿ ಡಿಕ್ಕಿ ಹೊಡೆದು ಬೀಳಿಸಿದನು ಎಂದರೆ ಸರಿಯಲ್ಲ. ಸ್ಕೂಟರ ಡಿಕ್ಕಿಗೆ ಒಳಗಾದ ವ್ಯಕ್ತಿಯ ತಲೆಯ ಹಿಂಭಾಗದಿಂದ ರಕ್ತ ಬರುತ್ತಿದ್ದು , ಮೂಗು ಮತ್ತು ಕಿವಿಯಿಂದ ರಕ್ತ ಬರುತ್ತಿತ್ತು ಮತ್ತು ಅವನು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲಾ ಎಂದರೆ ಸರಿಯಲ್ಲ . ಅಪಘಾತವಾದಾಗ ಸಮಯ ಸಂಜೆ 6.30 ಗಂಟೆ ಆಗಿತ್ತು ಎಂದರೆ ಸರಿಯಲ್ಲ. ಅಪಘಾತಕ್ಕೆ ಒಳಗಾದ ವ್ಯಕ್ತಿಯ ಹೆಸರು ರವಿ ಲಮಾಣಿ ಎಂದು ತಿಳಿಯಿತು ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೆ ನಾನು ಪ್ರತ್ಯಕ್ಷದರ್ಶಿ ಆಗಿದ್ದರೂ ಸಹ , ಎಲ್ಲಾ ವಿಷಯಗಳು ನನಗೆ ತಿಳಿದಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ನೋಡಿರುತ್ತೇನೆ ಎಂದು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಿದಂತೆ ನಾನು ಪೋಲೀಸರ ಮುಂದೆ "ನಾನು ಹಿತೇಶನಿಗೆ ನಿಧಾನವಾಗಿ . . . . . . . . . ರವಿ ತಂದೆ ಠಾಕೂರ ಲಮಾಣಿ ಅಂತಾ ತಿಳಿಯಿತು" ಎಂದು ನಿಪಿ.9 ರ ಪ್ರಕಾರ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಸಿ ಡಿ ಎನ್ ಆರೋಪಿ ಪರ ವಕೀಲರಿಂದಃ</u>**

3. ಸದರಿ ಮೂರು ಜನರು ಪಕ್ಕಪಕ್ಕದಲ್ಲಿ ನಿಂತುಕೊಂಡು ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದರು ಎಂದರೆ ಸರಿ. ಸದರಿ ಸಮಯಕ್ಕೆ ರಸ್ತೆ ದುರಸ್ತಿ ಮತ್ತು ನಿರ್ಮಾಣ ನಡೆಯುತ್ತಿದ್ದ ಸಲುವಾಗಿ ಒಂದೇ ರಸ್ತೆಯಿಂದ ಕಾರವಾರದಿಂದ ಗೋವಾಕ್ಕೆ ಮತ್ತು ಗೋವಾದಿಂದ ಕಾರವಾರಕ್ಕೆ ಬರುವ ವಾಹನಗಳು ಹೋಗುತ್ತಿದ್ದವು ಎಂದರೆ ಸರಿ. ಸದರಿ ಮೂರು ಜನ ವ್ಯಕ್ತಿಗಳು ಒಮ್ಮೇಲೆ ಬಂದ ಕಾರಣ ಆರೋಪಿಯು ಬ್ರೆಕ್ ಹಾಕಿರುತ್ತಾರೆ ಎಂದರೆ ಸರಿ.

**<u>ಮರು ವಿಚಾರಣೆಃ – ಇಲ್ಲಾ –</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**